


**ಮೈಸೂರಿನ ಸುಣ್ಣದ ಕೇರಿಯ ಒಬ್ಬ ಶ್ರೀಸಾಮಾನ್ಯ ವ್ಯಕ್ತಿಗೆ ರವಿವರ್ಮರು ಬರೆದಿರುವ ಪತ್ರಗಳು ಅವರ ಸ್ನೇಹಪರತೆ – ಸರಳ ವ್ಯಕ್ತಿತ್ವವನ್ನು ಸೂಚಿಸುವಂತಿವೆ.**

ನಮ್ಮ ದೇಶದ ಜನಮನದಲ್ಲಿ ಚಿರಸ್ಥಾಯಿ ಆಗಿರುವ ವರ್ಣಚಿತ್ರಗಳನ್ನು ರಚಿಸಿ ಭಾರತೀಯ ಕಲಾ ಪರಂಪರೆಗೊಂದು ಹೊಸ ಮೆರುಗನ್ನು ಕೊಟ್ಟ ಅದ್ಭುತ ಪ್ರತಿಭೆಯ ರಾಜ ಕಲಾವಿದನಿಗೂ ಮೈಸೂರಿನ ಸುಣ್ಣದ ಕೇರಿಯ ಒಬ್ಬ ಶ್ರೀ ಸಾಮಾನ್ಯನಿಗೂ ಎಲ್ಲಿಗೆಲ್ಲಿಯ ಸಂಬಂಧ?

ತನ್ನ ಜೀವಿತ ಕಾಲದಲ್ಲೇ ದಂತಕಥೆಯಾಗಿದ್ದ ರಾಜಾ ರವಿವರ್ಮರ ಕಲಾಪ್ರೌಢಿಮೆ ಹಾಗೂ ಅವರ ವ್ಯಕ್ತಿತ್ವದ ಮಾನವೀಯ ಮುಖವನ್ನು ಚಿತ್ರಿಸಿರುವ ಗೀತಾ ಸೀತಾರಾಮ್ ಅವರ 'ರಾಜ ಕಲಾವಿದ' ಧಾರಾವಾಹಿ ಓದಿದಾಗ ಎದುರಾದ ಪ್ರಶ್ನೆಯಿದು. ಆ ಕಥನಕ್ಕೆ ಪೂರಕವಾಗಿ ರವಿವರ್ಮರ ವ್ಯಕ್ತಿತ್ವದ ಬಗ್ಗೆ ಒಂದಿಷ್ಟು ಪೂರಕ ಮಾಹಿತಿ.

ರಾಜಾ ರವಿವರ್ಮ ಅವರು ಮೈಸೂರಿನ ಮಹಾರಾಜರಾಗಿದ್ದ ಶ್ರೀ ಚಾಮರಾಜೇಂದ್ರ ಒಡೆಯರ್ ಅವರ ಸಮಕಾಲೀನರು. ಮೈಸೂರಿನ ಮಹಾರಾಜರ ಆಹ್ವಾನದಂತೆ ರಾಜರಿಗಾಗಿ ಚಿತ್ರ ರಚಿಸಲು ರವಿವರ್ಮ ತಮ್ಮ ಸಹೋದರ ರಾಜವರ್ಮರೊಡನೆ ಮೈಸೂರಿಗೆ ಬಂದರು. ಆ ಸಂದರ್ಭದಲ್ಲಿ ಮೈಸೂರಿನ ಒಬ್ಬ ಶ್ರೀಸಾಮಾನ್ಯನಿಗೂ ಅಪ್ರತಿಮ ಕಲಾವಿದನಿಗೂ ಬೆಳೆದು ಬಂದ ಸ್ನೇಹ ಸಂಬಂಧಕ್ಕೆ ಕಾರಣರಾದವರು ದರೋಗ ಚೆಲುವಯ್ಯನವರು. (ಅವರ ವ್ಯಕ್ತಿಚಿತ್ರವನ್ನು ಮೈಸೂರು ವಾಸುದೇವಾಚಾರ್ಯರು ತಮ್ಮ 'ನೆನಪುಗಳು' ಕೃತಿಯಲ್ಲಿ ಕೊಟ್ಟಿದ್ದಾರೆ.)

ಚಾಮರಾಜೇಂದ್ರ ಒಡೆಯರ್ (ನಾಲ್ವಡಿ ಕೃಷ್ಣರಾಜ ಒಡೆಯರ್‌ರ ತಂದೆ) ಕಾಲದಲ್ಲಿ ದರೋಗ ಚೆಲುವಯ್ಯನವರು ಅರಮನೆ ಉದ್ಯೋಗಿ ಹಾಗೂ ಮೈಸೂರಿನ ಸುಣ್ಣದ ಕೇರಿಯ ನಿವಾಸಿ. ಪ್ರಾಮಾಣಿಕತೆ, ಕರ್ತವ್ಯ ಪಾರಾಯಣತೆಗೆ ಮತ್ತೊಂದು ಹೆಸರು ಚೆಲುವಯ್ಯನವರು. ಮಕ್ಕಳಿಲ್ಲದ ಅವರು ತಮ್ಮ ಅಣ್ಣನ ಮಗ ಶಿಂಗ್ರಯ್ಯ ಹಾಗೂ ತಮ್ಮನ ಮಗ ನರಸಿಂಹಯ್ಯನವರನ್ನು ಅರಮನೆಯ ಹುದ್ದೆಗಳಿಗೆ ಸೇರಿಸಿದರು. ವಿದ್ಯಾವಂತರಾಗಿದ್ದ ಶಿಂಗ್ರಯ್ಯನವರನ್ನು ತಮ್ಮ ದೈನಂದಿನ ವ್ಯವಹಾರ ನಿರ್ವಹಣೆಗಾಗಿ ಜೊತೆಯಲ್ಲಿಟ್ಟುಕೊಂಡರು. ವಿದ್ಯಾವಂತ, ಇಂಗ್ಲಿಷ್ ಬಲ್ಲ ಶಿಂಗ್ರಯ್ಯನವರು ಚೆಲುವಯ್ಯನವರ ಬಲಗೈಯಾದರು. ಸ್ವತಃ ಶಿಂಗ್ರಯ್ಯ 'ಶ್ರೀ ಚಾಮರಾಜೇಂದ್ರ ಚರಿತ್ರೆ' ಎಂಬ ಗ್ರಂಥವನ್ನು ಬರೆದಿದ್ದಾರೆ. ಇದರಲ್ಲಿ ಯದುವಂಶದ ಇತಿಹಾಸ, ಒಡೆಯರ್‌ಗಳ ರಾಜ ಪರಂಪರೆ, ಮುಖ್ಯವಾಗಿ ಚಾಮರಾಜೇಂದ್ರ ಒಡೆಯರ್ ಕಾಲದ ಘಟನೆಗಳು ಚಿತ್ರಿತವಾಗಿದೆ. 'ಮಾಲತಿಯ ಮಂತ್ರ', 'ಮಕರಂದಿಕಾ ಪ್ರಕರಣ' ನಾಟಕಗಳು ಶಿಂಗ್ರಯ್ಯನವರ ಇತರ ಕೃತಿಗಳು.

ಚಾಮರಾಜೇಂದ್ರ ಒಡೆಯರ್ ಅವರ ಆಹ್ವಾನದ ಮೇರೆಗೆ ಮೈಸೂರಿಗೆ ಬಂದ ರವಿವರ್ಮ ಅವರಿಗೆ ಸಕಲ ಅನುಕೂಲಗಳನ್ನು ಅರಮನೆಯಿಂದ ಒದಗಿಸಬೇಕಾಗಿತ್ತು. ಆ ಕರ್ತವ್ಯ ನಿರ್ವಹಣೆಯಲ್ಲಿ ದರೋಗ ಚೆಲುವಯ್ಯನವರ ಪಾತ್ರವೂ ಇತ್ತು.


prepared for a new palace and that it will become when finished more splendid than the old one. Owing to the plague in Bombay we could not go there for the last two years. With brother's best regards to your father and yourself.
yours truly
C Raja Raja Varma

ರವಿವರ್ಮ ಪತ್ರ

ರವಿವರ್ಮರವರ ಅಗತ್ಯಗಳನ್ನು ಪೂರೈಸಲು ನಿಯುಕ್ತರಾದ ವಿದ್ಯಾವಂತ ಶಿಂಗ್ರಯ್ಯನವರಿಗೂ ರಾಜಾ ರವಿವರ್ಮರಿಗೂ ಬೆಳೆದ ಸ್ನೇಹ ಪತ್ರ ವ್ಯವಹಾರದಲ್ಲೂ ಮುಂದುವರಿಯಿತು. ರವಿವರ್ಮ ಹಾಗೂ ಸಹೋದರ ರಾಜವರ್ಮರು ಶಿಂಗ್ರಯ್ಯನವರಿಗೆ ಬರೆದ ಪತ್ರಗಳು ಶಿಂಗ್ರಯ್ಯ ವಂಶಸ್ಥರಲ್ಲಿ ಇನ್ನೂ ಇವೆ. ಆ ಪತ್ರಗಳು ಕಲಾವಿದ ರವಿವರ್ಮರ ಕಾರ್ಯವ್ಯಾಪ್ತಿ ಹಾಗೂ ರಾಜ ಅಂತಸ್ತನ್ನು ಮೀರಿದ ಅವರ ಸ್ನೇಹಪರತೆ, ಸರಳತೆಯನ್ನು ಎತ್ತಿ ಹಿಡಿಯುತ್ತವೆ. ಈ ಅಪರೂಪದ ಪತ್ರಗಳ ಸಾರಾಂಶವನ್ನು ಮುಂದೆ ನೋಡಬಹುದು.

ಆ ಪತ್ರಗಳಲ್ಲಿ ಒಂದು, ಚೆಲುವಯ್ಯನವರ ತಮ್ಮನ ಮಗ ನರಸಿಂಹಯ್ಯನವರಿಗೆ ರವಿವರ್ಮರ ತಮ್ಮ ರಾಜಾ ರಾಜವರ್ಮ ಬರೆದದ್ದು. ನರಸಿಂಹಯ್ಯನವರು ಚಾಮರಾಜ ಒಡೆಯರ್ ನಿಧನ ವಾರ್ತೆ ತಿಳಿಸಿ ಪತ್ರ ಬರೆದಾಗ, ರಾಜವರ್ಮ ಅವರು ಕೊಟ್ಟ ಉತ್ತರದಲ್ಲಿ ಮಹಾರಾಜರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿ, 'ಚಾಮರಾಜ ಒಡೆಯರ್ ಇಂಡಿಯಾದ ಅತ್ಯುತ್ತಮ ರಾಜರಲ್ಲಿ ಒಬ್ಬರು. ಅವರು ನಮಗೆ ತೋರಿದ ಪ್ರೀತಿ–ಕರುಣೆಗಳನ್ನು ಮರೆಯಲು ಸಾಧ್ಯವಿಲ್ಲ' ಎಂದು ಹೇಳಿದ್ದಾರೆ. ಮತ್ತು ಈಗಿನ ಎಳೆ ವಯಸ್ಸಿನ ಮಹಾರಾಜರು ತಮ್ಮ ತಂದೆಯಂತೆಯೇ ಅತಿಶಯವಾದ ಯಶಸ್ಸನ್ನು ಪಡೆಯಲಿ ಎಂದು ಹಾರೈಸಿದ್ದಾರೆ. ಜನೋಪಕಾರಿ ಕಾರ್ಯಗಳನ್ನು ಮಾಡಿ, ತಮ್ಮ ವ್ಯಕ್ತಿತ್ವದ ಪ್ರಭಾವದಿಂದಲೂ ರಾಜಋಷಿ ಎನಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ವಿಷಯದಲ್ಲಿ ಈ ಶುಭ ಹಾರೈಕೆ ಎಷ್ಟು ನಿಜವಾಯಿತು! ಮತ್ತೊಂದು ಪತ್ರ ಫೆಬ್ರುವರಿ 14, 1906ರಲ್ಲಿ ರವಿವರ್ಮ ಶಿಂಗ್ರಯ್ಯನವರು ಬರೆದ 'ಚಾಮರಾಜೇಂದ್ರ ಚರಿತೆ' ಗ್ರಂಥವನ್ನು ಹೊಗಳಿ, 'ಈ ಕೃತಿ ಶ್ರೀ ಚಾಮರಾಜೇಂದ್ರರ ಒಳ್ಳೆಯ ಗುಣಗಳನ್ನೆಲ್ಲಾ ಎತ್ತಿ ಹಿಡಿದಿದೆ. ಮುಂದೆ ಇಂಥ ಅನೇಕ ಬರಹಗಳು ನಿಮ್ಮಿಂದ ಬರಲಿ' ಎಂದು ಹೇಳಿದ್ದಾರೆ.

ಇನ್ನೊಂದು ಪತ್ರ ತ್ರಿವೇಂಡ್ರಮ್‌ನಿಂದ ಜನವರಿ 24, 1905ರಲ್ಲಿ ಶಿಂಗ್ರಯ್ಯನವರಿಗೆ ರವಿವರ್ಮರು ಬರೆದದ್ದು. ಆ ವೇಳೆಗೆ ಸಹೋದರ ರಾಜವರ್ಮ ನಿಧನರಾಗಿದ್ದರು. ಆ ವಿಷಯವಾಗಿ ಸಂತಾಪ ಸೂಚಿಸಿ ಶಿಂಗ್ರಯ್ಯನವರು ಬರೆದ ಪತ್ರಕ್ಕೆ ಉತ್ತರವಾಗಿದೆ. ರವಿವರ್ಮರು ತಮ್ಮ ಪತ್ರದಲ್ಲಿ ಶಿಂಗ್ರಯ್ಯನವರಿಗೆ ವಂದಿಸಿ, ಪ್ರೀತಿಯ ತಮ್ಮನ ವಿಯೋಗಕ್ಕೆ ಶೋಕ ವ್ಯಕ್ತಪಡಿಸಿ, 'ಸರ್ವಶಕ್ತನಿಗೆ ತಲೆ ಬಾಗಲೇಬೇಕು. ತಮ್ಮನ ಆತ್ಮಕ್ಕೆ ಶಾಂತಿ ಸಿಗಲಿ' ಎಂದು ಹೇಳಿದ್ದಾರೆ.

ಪತ್ರ ವ್ಯವಹಾರ ಮಾತ್ರವಲ್ಲದೆ ಶಿಂಗ್ರಯ್ಯನವರನ್ನು ಕೇರಳಕ್ಕೆ ಕರೆದುಕೊಂಡು ಹೋಗಿ ಕೊಚ್ಚಿನ್ ಸುತ್ತಮುತ್ತಲಿನ ಕಾಡುಪ್ರದೇಶವನ್ನು ಆನೆ ಮೇಲೆ ಕೂರಿಸಿ, ಓಡಾಡಿಸಿ ರವಿವರ್ಮರು ತೋರಿಸಿದ್ದರು. ರವಿವರ್ಮರು ಕೊಟ್ಟ ಒಬ್ಬ ಸ್ತ್ರೀಯ ಚಿತ್ರ ಶಿಂಗ್ರಯ್ಯನವರ ವಂಶಸ್ಥರಲ್ಲಿ ಈಗಲೂ ಇದೆ.

ಈ ಪತ್ರ ವ್ಯವಹಾರ ನೋಡಿದರೆ ಓದುಗರ ಮನದಲ್ಲಿ ಒಂದು ವಿಸ್ಮಯದ ಅಲೆ ಏಳಬಹುದು. ಎಲ್ಲಿಯ ರಾಜ ಮನೆತನದ ಸುಪ್ರಸಿದ್ಧ ವ್ಯಕ್ತಿ? ಎಲ್ಲಿಯ ಒಬ್ಬ ಶ್ರೀ ಸಾಮಾನ್ಯ? ಸ್ವಾರ್ಥರಹಿತ ಸ್ನೇಹ ಎಷ್ಟು ಅಮೂಲ್ಯವಾದದ್ದು; ಸ್ನೇಹಕ್ಕೆ ಜಾತಿ, ಮತ, ವರ್ಗ, ಅಂತಸ್ತು ಯಾವುದೂ ತಡೆಯಲ್ಲ; ಒಳ್ಳೆಯ ಸ್ನೇಹವೂ ಮನುಷ್ಯನಿಗೆ ಒಂದು ಸೌಭಾಗ್ಯ ಎನ್ನುವುದನ್ನು ಈ ಪತ್ರಮೈತ್ರಿ ಖಚಿತಪಡಿಸುತ್ತದೆ.

ಶಿಂಗ್ರಯ್ಯರವರ ವಂಶಸ್ಥರಾದ ಡಾ. ಲಲಿತಮ್ಮ ಮತ್ತು ನೀರಜ ಅವರು ರವಿವರ್ಮರ ಪತ್ರಗಳನ್ನು ಜತನವಾಗಿ ಇರಿಸಿದ್ದರಿಂದ ಈ ಲೇಖನ ಸಾಧ್ಯವಾಯಿತು.

■ ಪದ್ಮಾ ಶ್ರೀರಾಮ